ಸರ್ಕಾರದಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತೇವೆ ಅದರ ಪ್ರಕಾರ ಕೊಡುವುದಕ್ಕೆ ನಮ್ಮ ಬಜೆಟನಲ್ಲಿ ಸಾಧ್ಯವಿದೆ, ಅಷ್ಟು ಕೊಡುತ್ತೇವೆ. ನೀವು ಹೇಳಿದಷ್ಟು ಕೊಡಿ ಎಂದರೆ ಯಾರಿಗೆ ಸಾಧ್ಯವಿದೆ? ನಾವು ವಿಚಾರ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಬೇಕಾದರೆ ಅಕ್ಕಿಯನ್ನು ತೆಗೆದುಕೊಳ್ಳುತ್ತಾರೆ ಬೇಡವೆಂದರೆ ಬಿಡುತ್ತಾರೆ. ಗೋಧಿಯನ್ನು ಬೇಕಾದೆರೆ ತೆಗೆದುಕೊಳ್ಳುತ್ತಾರೆ. ನೀವು ರೇಷಿಯೋ ಅಷ್ಟೇ ಹೇಳಿದರೆ,

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಖರ್ಗೆಯವರೇ ರೇಷಿಯೋ ಅಂದರೆ ಅಲ್ಲಿ ತೆಗೆದುಕೊಳ್ಳುವಂಥ ಲೆಕ್ಕವನ್ನು ಹೇಗೆ ಹೊಂದಿಸುವುದು. ಅಕ್ಕಿಯನ್ನು 10 ಕೆ.ಜಿ. ಈ ರೇಟಿನಲ್ಲಿ ಕೊಡುತ್ತೇವೆಂದು ಹೇಳಿದ್ದೇವೆ. 5 ಕೆ.ಜಿ.ಗೋಧಿಯನ್ನು ಈ ಬೆಲೆಯಲ್ಲಿ ಕೊಡುತ್ತೇವೆಂದು ಹೇಳಿದ್ದೇವೆ. ಯಾವುದು ಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ಇವತ್ತು ನಮ್ಮಲ್ಲಿ 10 ಕೆ.ಜಿ ಅಕ್ಕಿಯನ್ನು ತೆಗೆದುಕೊಳ್ಳುತ್ತಾರೆ, ಎಲ್ಲರೂ ತೆಗೆದುಕೊಳ್ಳುತ್ತಾರೆ. ಇವತ್ತು ಎಲ್ಲರಿಗೂ ಅಕ್ಕಿ ಬೇಕು. ಮಾನ್ಯ ಡಿ.ಆರ್ ಪಾಟೀಲ್ ಅವರು ಹೇಳಿದ ಹಾಗೆ ಅಕ್ಕಿಯನ್ನು ಬಿಡುತ್ತಾರೆ, ಗೋಧಿಯನ್ನು ಬಿಡುತ್ತಾರೆಂಬ ಪ್ರಶ್ನೆಯೇ ಅಲ್ಲಿ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಸಹಕಾರ ಸಚಿವರು ಇದರ ಬಗ್ಗೆ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ನಾವು ಹೇಳಿದ್ದು ನೀವು 10 ಕೆ.ಜಿ ಅಕ್ಕಿಗೆ ಸಬ್ಸಿಡಿ ಕೊಡುತ್ತೀರಿ, ನಿಮಗೆ ಹಣಕಾಸಿನ ಹೊರೆಯಾಗುವುದಿಲ್ಲ. ಅಕ್ಕಿ ತೆಗೆದುಕೊಂಡರೆ ನೀವು 100 ಕೆ.ಜಿ.ಗೆ ಸಬ್ಸಿಡಿಯನ್ನು ಕೊಡುವುದಕ್ಕೆ ತಯಾರಾಗಿದ್ದೀರಿ. ಅದರಲ್ಲಿ 5 ಕೆ.ಜಿ. ಅಕ್ಕಿ 5 ಕೆ.ಜಿ. ಗೋಧಿಯನ್ನು ತೆಗೆದುಕೊಳ್ಳುತ್ತಾರೆ. ಅಕ್ಕಿಗೆ ಕೊಡುವಂತಹ ಸಬ್ಸಿಡಿಯನ್ನು ಗೋಧಿಗೆ ಕೊಡಿ ಎಂದು ಕೇಳುತ್ತಿದ್ದೇನೆ. ಇದರಿಂದ ಪೌಷ್ಟಿಕಾಂಶವಿರುವ ಧಾನ್ಯ ಸಿಕ್ಕಂಥಾಗುತ್ತದೆ, ಅದೇ ಬೆಲೆ ಮಾಡಿ ಅಕ್ಕಿ ಕೊಡುತ್ತೇವೆ ಗೋಧಿ ಕೊಡುವುದಿಲ್ಲ ಏನು ಹೇಳುವುದು? ನಿಮಗೆ ಉತ್ತರ ಕರ್ನಾಟಕದ ಜನರ ಬಗ್ಗೆ ಕಾಳಜಿ ಇಲ್ಲವೆಂದು ಅರ್ಥವಾಗುತ್ತದೆ. ನಿಮಗೆ ಹಣಕಾಸಿನ ಹೊರೆ ಎಲ್ಲಿದೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಡಿ ಆರ್ ಪಾಟೀಲರವರು ಡಿಟೈಲ್ ಆಗಿ ಹೇಳಿ ಎಂದರೆ ನಾನು ಹೇಳುತ್ತೇನೆ. ನಾನು ಉತ್ತರ ಕರ್ನಾಟಕದ ಪರವಾಗಿ ಇಲ್ಲವೆಂದು. ಏನು ಮಾತನಾಡುತ್ತಿದ್ದಾರೆ. ನಾವು ಇವತ್ತು ಅಕ್ಕಿಯನ್ನು ಊಟ ಮಾಡುತ್ತಿದ್ದೇವೆ. ಬಡವರ ಮನೆಯಲ್ಲೂ ಇವತ್ತು ಊಟ ಮಾಡುತ್ತಿದ್ದಾರೆ. ಹಬ್ಬ ಹುಣ್ಣಿಮೆಗೆ 10 ಕೆ.ಜಿ ಪ್ರತಿ ತಿಂಗಳಿಗೂ ಆಗುವುದಿಲ್ಲ. ಈ ದೃಷ್ಟಿಯಿಂದ ಅದನ್ನು ಎಲ್ಲರೂ ತೆಗೆದುಕೊಳ್ಳುತ್ತಾರೆ.

ಸಾತನೂರು ವಿಧಾನ ಸಭಾಕ್ಷೇತ್ರದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರ ಚುನಾವಣೆ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ನಿಯಮ 69ರ ಮೇಲೆ ನೋಟೀಸ್ ಕೊಟ್ಟಿದ್ದೇನೆ. ಪಂಚಾಯತ್ ರಾಜ್ ವಿಚಾರ, ನನ್ನ ಕ್ಷೇತ್ರದಲ್ಲಿರುವ ಹೂಕುಂದ ಗ್ರಾಮ ಪಂಚಾಯತ್

ಚುನಾವಣೆ ನಡೆದು ಸುಮಾರು ಒಂದು ವಾರವಾಗಿದೆ ಇದುವರೆಗೂ ಫಲಿತಾಂಶವನ್ನು ಪ್ರಕಟಣೆಮಾಡಿಲ್ಲ. ಇದಕ್ಕೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಉತ್ತರ ನೀಡಬೇಕು. ಒಬ್ಬ ಎಸ್.ಟಿ. ಮಹಿಳೆ ಆಯ್ಕೆಯಾಗಿ ಒಂದು ವಾರವಾಗಿದೆ. ಇವತ್ತಿನವರೆಗೂ ಚುನಾವಣೆಯನ್ನು ಪ್ರಕಟಣೆ ಮಾಡಿಲ್ಲ. ಇದರ ಬಗ್ಗೆ ನಾನು ಕೊಟ್ಟಿದ್ದೇನೆ. ಇದು ಒಂದೇ ವಿಚಾರ ಮಾನ್ಯ ಮಂತ್ರಿಗಳು ನಾಳೆ ಸಾಯಂಕಾಲದ ಅಷ್ಟೊತ್ತಿಗೆ ಛೇರಮನ್ ಗಿರಿಯನ್ನು ಪ್ರಕಟಣೆ ಮಾಡುತ್ತೇವೆಂದರೆ ಮುಗಿಯಿತು.

ಉಪಾಧ್ಯಕ್ಷರು : ನಾವು ಉತ್ತರ ಕೊಡಿಸುತ್ತೇವೆ. ಈಗ ನಿಮ್ಮ ಹತ್ತಿರ ಉತ್ತರ ಇದೆಯೋ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಅದು ಇನ್ನೂ ಪ್ರೊಸೆಸ್ ಆಗಿ ನನಗೆ ನೋಟೀಸ್ ಬಂದಿಲ್ಲ. ಅವರು ವೈಯಕ್ತಿಕವಾಗಿ ಪ್ರಸ್ತಾಪ ಮಾಡಿದ್ದರಿಂದ ಖಾಸಗಿಯಾಗಿ ಡಿ.ಸಿಯವರ ಜೊತೆಯಲ್ಲಿ ಫೋನನಲ್ಲಿ ಮಾತನಾಡಿದ್ದೇನೆ. ನಾಳೆ ಇದು ಗಮನಸೆಳೆಯುವ ಸೂಚನೆಯಲ್ಲಿ ಬರುತ್ತದೆ. ಆಗ ನಾನು ಉತ್ತರ ಕೊಡುತ್ತೇನೆ. ಈ ವಿಚಾರದಲ್ಲಿ ಏಕೆ ಇಲ್ಲಿಯವರೆಗೆ ವಿಳಂಬ ವಾಗಿದೆ ಎಂದು ಫೋನನಲ್ಲಿ ಮಾತನಾಡಿದ್ದೇನೆ. ಅವರು ಫೈಲ್ ತರಿಸಿ ನಮಗೆ ತಿಳಿಸುತ್ತಾರೆಂದು ಹೇಳಿದ್ದಾರೆ. ನಾನು ಸದನದಲ್ಲಿ ಇದ್ದೆ. ಅವರ ಹತ್ತಿರ ಮಾತನಾಡುವುದಕ್ಕೆ ಆಗಲಿಲ್ಲ. ಅದ ಪ್ರೊಸೆಸ್ ಆಗಿ ಬಂದಿಲ್ಲ. ಸ್ಪೀಕರ್ ಅವರ ಹತ್ತಿರವಿದೆ. ಆದುದರಿಂದ ನಾಳೆ ಉತ್ತರ ಕೊಡುತ್ತೇನೆ.

ರಾಜ್ಯದಲ್ಲಿ ಬರಗಾಲದ ಬಗ್ಗೆ ಚರ್ಚೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಬಹಳ ಸಮಯದ ನಂತರ ಯಾವ ಉದ್ದೇಶಕ್ಕಾಗಿ ತಮ್ಮ ಸದನವನ್ನು ಸೇರಬೇಕೆನ್ನುವಂತಹ ಅಪೇಕ್ಷೆ ಇತ್ತೋ ಆ ಒಂದು ಉದ್ದೇಶಕ್ಕೋಸ್ಕರ ಈಗ ಸಮಯ ಸಿಕ್ಕಿದೆ. ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಬೇಕು.

5.30 ಪಿ.ಎಂ

ಸದನ ಕರೆಯಬೇಕು, ಅಧಿವೇಶನ ಸೇರಬೇಕು ಎಂದು ಹೇಳಿ ಸದನದ ನಾಯಕರನ್ನು ಕೇಳಿಕೊಂಡಿವಿ, ಕೊನೆಗೆ ನಾಯಕರು ಒಪ್ಪಲಿಲ್ಲ ಅಂದಾ ಗೌರ್ನರಗೆ ಕೂಡ ಇದರ ಬಗ್ಗೆ ಒಂದು ಮನವಿಯನ್ನು ಕೊಟ್ಟಿದ್ದೇವೆ. ಆ ಮನವಿಯನ್ನು ಕೂಡ ನಾವು ಸ್ಪಷ್ಟವಾಗಿ ತಿಳಿಸಿದ್ದೇವೆ, ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಹೇಳಿಕೆ ಪ್ರಕಾರ ಇವತ್ತು ನಾವು ಖುದ್ದಾಗಿ ಕೆಲವು ಜಿಲ್ಲೆಗಳನ್ನು ವೀಕ್ಷಣೆ ಮಾಡಿದೆ ಪ್ರಕಾರ ಇವತ್ತಿನ ದಿವಸ ಸುಮಾರು 20 ಜಿಲ್ಲೆಗಳ ಪೈಕಿ 18 ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಈ ಒಂದು ಬರಗಾಲ ಪರಿಸ್ಥಿತಿ ಇದೆ. ಕೆಲವು ಭಾಗದಲ್ಲಿ ಮಳೆಯಾಗಿರಬಹುದು, ಕೆಲವು ಭಾಗದಲ್ಲಿ ಕುಡಿಯುವ ನೀರಿನ ಪರಿಸ್ಥಿತಿನ ಸುಧಾರಣೆ ಆಗಿರಬಹುದು. ಆದರೆ ಬಹು ಭಾಗದಲ್ಲಿ ಇನ್ನು ಕುಡಿಯುವ ನೀರಿನ ಪರಿಸ್ಥಿತಿಯಾಗಲಿ, ಕಾಮಗಾರಿ ಕೆಲಸಗಳಾಗಲಿ ಮತ್ತು ಈ ಅಗ್ರಿಕಲ್ಚರ್ ಫಾರ್ಮರ್ಸ ಏನಿದ್ದಾರೆ, ಕೃಷಿ ಕಾರ್ಮಿಕರು ಅವರಿಗೆ ಸಾಕಷ್ಟು ಕೆಲಸವನ್ನು ಒದಗಿಸಿತಕ್ಕಂತಹ ವ್ಯವಸ್ಥೆ ಇನ್ನು ಸಮಾಧಾನಕಾರವಾಗಿ ನಡೆದಿಲ್ಲ. ಕೇಂದ್ರ ಸರ್ಕಾರಕ್ಕೆ ಈಗಾಗಲೇ ಅವರು ಮನವಿಯನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದಿಂದ